**ದಿನಾಂಕ 29/10/2014 ರಂದು ಅಪರಾಹ್ನ 4.00ಗಂಟೆಗೆ ಕರ್ನಾಟಕ ರಾಜ್ಯ ಮುಖ್ಯ ಮಾಹಿತಿ ಆಯುಕ್ತರು ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ಮಾಹಿತಿ ಆಯುಕ್ತರುಗಳ ಸಭೆಯ ನಡವಳಿಗಳು**

ಸಭೆಯಲ್ಲಿ ಹಾಜರಿದ್ದವರು

1. ಶ್ರೀ ಎ.ಕೆ.ಎಂ ನಾಯಕ್ ರಾಜ್ಯ ಮುಖ್ಯ ಮಾಹಿತಿ ಆಯುಕ್ತರು
2. ಶ್ರೀ ಡಿ.ತಂಗರಾಜು ರಾಜ್ಯ ಮಾಹಿತಿ ಆಯುಕ್ತರು
3. ಶ್ರೀ ಎಂ.ಆರ್.ಪೋಜಾರ್, ರಾಜ್ಯ ಮಾಹಿತಿ ಆಯುಕ್ತರು
4. ಶ್ರೀ ಟಿ. ರಾಮನಾಯಕ್, ರಾಜ್ಯ ಮಾಹಿತಿ ಆಯುಕ್ತರು
5. ಡಾ. ಶೇಖರ್ ಡಿ ಸಜ್ಜನರ್, ರಾಜ್ಯ ಮಾಹಿತಿ ಆಯುಕ್ತರು
6. ಶ್ರೀ ಕೃಷ್ಣಮೂರ್ತಿ, ರಾಜ್ಯ ಮಾಹಿತಿ ಆಯುಕ್ತರು
7. ಶ್ರೀ ಶಂಕರ್ ಆರ್ ಪಾಟೀಲ್, ರಾಜ್ಯ ಮಾಹಿತಿ ಆಯುಕ್ತರು
8. ಶ್ರೀ ವೃಷಬೇಂದ್ರಮೂರ್ತಿ, ಕಾರ್ಯದರ್ಶಿ
9. ಶ್ರೀ ಬಿ. ಶ್ರೀರಾಮರೆಡ್ಡಿ, ಕಾನೂನು ಅಧಿಕಾರಿ.

ಸಭೆಯಲ್ಲಿ ಈ ಕೆಳಕಂಡ ವಿಷಯಗಳನ್ನು ಚರ್ಚಿಸಲಾಯಿತು.

1. **ಹೊಸ ಆಯುಕ್ತರುಗಳಿಗೆ ಸ್ವಾಗತ**

ದಿನಾಂಕ:14.10.2014ರ ಸರ್ಕಾರದ ಅಧಿಸೂಚನೆಯನ್ವಯ ರಾಜ್ಯ ಮಾಹಿತಿ ಆಯೋಗಕ್ಕೆ ಹೊಸದಾಗಿ ನೇಮಕವಾಗಿರುವ ಶ್ರೀ ಎಲ್.ಕೃಷ್ಣಮೂರ್ತಿ ಹಾಗೂ ಶ್ರೀ ಶಂಕರ್ ಆರ್ ಪಾಟೀಲ್ ಅವರುಗಳು ರಾಜ್ಯ ಮಾಹಿತಿ ಆಯೋಗದಲ್ಲಿ ಕಾರ್ಯಭಾರವಹಿಸಿಕೊಂಡಿರುವುದನ್ನು ಸಭೆಯ ಗಮನಕ್ಕೆ ತಂದ ಕಾರ್ಯದರ್ಶಿಗಳು ಇದಕ್ಕೆ ಸಂಬಂಧಪಟ್ಟ ಸರ್ಕಾರದ ಅಧಿಸೂಚನೆಯನ್ನು ಸಭೆಯಲ್ಲಿ ಮಂಡಿಸಿದರು.

ನೂತನವಾಗಿ ರಾಜ್ಯ ಮಾಹಿತಿ ಆಯೋಗದಲ್ಲಿ ಆಯುಕ್ತರುಗಳಾಗಿ ಕಾರ್ಯಭಾರ ವಹಿಸಿಕೊಂಡಿರುವ ಶ್ರೀ ಎಲ್.ಕೃಷ್ಣಮೂರ್ತಿ ಹಾಗೂ ಶ್ರೀ ಶಂಕರ್ ಆರ್ ಪಾಟೀಲ್ ಅವರುಗಳನ್ನು ಆಯೋಗದ ರಾಜ್ಯ ಮುಖ್ಯ ಮಾಹಿತಿ ಆಯುಕ್ತರು ಹಾರ್ದಿಕವಾಗಿ ಸ್ವಾಗತಿಸಿದರು. ಅಂತೆಯೇ ಸರ್ಕಾರದ ಅಧಿಸೂಚನೆಯನ್ವಯ ಆಯೋಗದಿಂದ ಇಬ್ಬರು ಆಯುಕ್ತರುಗಳ ನೇಮಕದ ಬಗ್ಗೆ ಕಚೇರಿ ಆದೇಶವನ್ನು ಹೊರಡಿಸುವಂತೆ ಕಾರ್ಯದರ್ಶಿಗಳಿಗೆ ಸೂಚಿಸಿದರು.

ಮುಂದುವರೆದು ಮಾತನಾಡುತ್ತಾ ಮುಖ್ಯ ಮಾಹಿತಿ ಆಯುಕ್ತರು, ನ್ಯಾಯಾಲಯ ಸಭಾಂಗಣ–2ರಲ್ಲಿ ಈಗಾಗಲೇ ವಿಚಾರಣೆ ಕೈಗೊಂಡು ದಿನಾಂಕ ನಮೂದಿಸದೆ ಮುಂದೂಡಲಾಗಿರುವ ಹಾಗೂ ವಿಚಾರಣೆಗೆ ಇನ್ನೂ ತೆಗೆದುಕೊಳ್ಳದೆ ಇರುವ ಪ್ರಕರಣಗಳನ್ನು ಇಬ್ಬರು ಆಯುಕ್ತರ ಕಾರ್ಯಾಲಯಕ್ಕೆ ಕಾರ್ಯಹಂಚಿಕೆ ಮಾಡುವಂತೆ ಮತ್ತು ಅಗತ್ಯ ಸಿಬ್ಬಂದಿ ಹಾಗೂ ಇನ್ನಿತರ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸುವಂತೆ ಕಾರ್ಯದರ್ಶಿಗಳಿಗೆ ಸೂಚಿಸಿ ಎಲ್ಲರಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ರಾಜ್ಯ ಮುಖ್ಯ ಮಾಹಿತಿ ಆಯುಕ್ತರು